**ಸಿ.ಸಿ. ನಂಬರಃ 2408/2024**

**ಸಾಕ್ಷಿಃ ಪಿ. ಡಬ್ಲ್ಯೂಃ 1**

**(ಇಂದು ತಾಃ 23-01-2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

**(ಸಾಕ್ಷಿಯ ಸ್ವಪ್ರಮಾಣೀಕೃತ ಹೇಳಿಕೆಯನ್ನು ಮುಖ್ಯ ವಿಚಾರಣೆಯಾಗಿ ಪರಿಗಣಿಸಲಾಗಿರುತ್ತದೆ)**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ವಿ.ಎ.ಎ. ವಕೀಲರಿಂದ,**

2. ಆರೋಪಿಗೆ ನೀಡಿದ ಸಾಲವು ನಗದು ಉದ್ಧರಿ ಸಾಲ ಆಗಿರುತ್ತದೆ. ನಗದು ಉದ್ಧರಿ ಸಾಲದ ಅವಧಿ ಒಂದು ವರ್ಷ ಆಗಿರುತ್ತದೆ ಎಂದರೆ ಹೌದು. ಸದ್ರಿ ಒಂದು ವರ್ಷದ ಅವಧಿ ಮುಗಿದ ತಕ್ಷಣ ಸಾಲ ವಸೂಲಾತಿಗೆ ಕ್ರಮ ತೆಗೆದುಕೊಳ್ಳಬೇಕು ಎಂದರೆ ಹೌದು. ದೂರಿನಲ್ಲಿ ಹೇಳಿದ ಸಾಲದ ಅವಧಿ ಮುಗಿದ ತಕ್ಷಣ ನೋಟೀಸ್ ನೀಡಿರುತ್ತೇವೆ. ಆ ರೀತಿ ಸಾಲದ ಅವಧಿ ಮುಗಿದ ನಂತರ ಮೇ 2020 ರಂದು ನೋಟೀಸ್ ನ್ನು ನೀಡಿರುತ್ತೇವೆ. ಸದ್ರಿ ನೋಟೀಸ್ ಆರೋಪಿಗೆ ಜಾರಿಯಾಗಿರುತ್ತದೆ. ಸದ್ರಿ ನೋಟೀಸಿನ ಪ್ರತಿಯನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ. ಸದ್ರಿ ನೋಟೀಸ್ ನ್ನು ಫಿರ್ಯಾದಿ ಸಂಘದಿಂದ ನೀಡಿರುತ್ತೇವೆ. ಸದ್ರಿ ನೋಟೀಸಿಗೆ ಯಾವುದೇ ಖರ್ಚು ವಿಧಿಸಿರುವುದಿಲ್ಲ. ದೂರಿನಲ್ಲಿ ಹೇಳಿದ ಸಾಲಕ್ಕೆ ಸಂಬಂಧಿಸಿದಂತೆ, ಪಂಚಾಯತ ದಾವೆಯನ್ನು ದಾಖಲಿಸಿರುತ್ತೇವೆ. ಸದ್ರಿ ದಾವೆಯಲ್ಲಿ 2024 ನೇ ಇಸವಿಯಲ್ಲಿ ಅವಾರ್ಡ ಆಗಿರುತ್ತದೆ. ಆ ಬಗ್ಗೆ ಅಮಲ್ಜಾರಿ ಪ್ರಕರಣವನ್ನು ದಾಖಲಿಸಿರುವುದಿಲ್ಲ.

3. ಸಾಲದ ಅವಧಿ ಮುಗಿದ ನಂತರ acknowledgment of debt ಪಡೆದುಕೊಂಡಿರುವುದಿಲ್ಲ. ಆದ್ದರಿಂದ ದೂರಿನಲ್ಲಿ ಹೇಳಿರುವ ಸಾಲವು ಅವಧಿ ಮೀರಿದ ಸಾಲ ಆಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿಯು ನಿಪಿ-2 ತುಂಬಿದ ಚೆಕ್ ನ್ನು ಫಿರ್ಯಾದಿ ಸಂಘಕ್ಕೆ ತಂದು ಕೊಟ್ಟಿರುತ್ತಾನೆ. ನಿಪಿ-2 ಚೆಕ್ ನಲ್ಲಿರುವ ಸಹಿ ಮಾಡಿದ ಪೆನ್ನಿನ ಶಾಹಿ ಮತ್ತು ಇತರ ಬರವಣಿಗೆಗಳಲ್ಲಿನ ಪೆನ್ನಿನ ಶಾಹಿಯಲ್ಲಿ ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ಅವೆರಡೂ ಬರವಣಿಗೆಗಳಲ್ಲೂ ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ದಿನಾಂಕಃ 08-08-2024 ರಂದು ಆರೋಪಿ ಚೆಕ್ಕು ನೀಡಿರುತ್ತಾನೆ. ದಿನಾಂಕಃ 08-08-2024 ರವರೆಗೆ ದೂರಿನಲ್ಲಿ ಹೇಳಿದ ಸಾಲದ ಖಾತೆಯಲ್ಲಿ ಎಷ್ಟು ಅಸಲು, ಎಷ್ಟು ಬಡ್ಡಿ ಬಾಕಿ ಇರುತ್ತದೆ ಎಂಬ ಬಗ್ಗೆ ಆರೋಪಿಗೆ ತಿಳಿಸಿರುತ್ತೇವೆ. ಸದ್ರಿ ದಿನಾಂಕದಂದು ಸಾಲದ ಖಾತೆಯಲ್ಲಿ ಆರು ಲಕ್ಷದ ಎಂಟು ಸಾವಿರ ರೂಪಾಯಿ ಅಸಲು ಬಾಕಿ ಇತ್ತು. ಬಡ್ಡಿ ಮತ್ತು ದಂಡದ ಬಡ್ಡಿ ಒಂದು ಲಕ್ಷದ ಎಂಟು ಸಾವಿರದಾ ಐದುನೂರು ರೂಪಾಯಿ ಬಾಕಿ ಇತ್ತು. ಆರೋಪಿಯು ಸಾಲ ಪಡೆದ ನಂತರ ಒಟ್ಟೂ ಎರಡು ಲಕ್ಷದ ನಲವತ್ತು ಸಾವಿರ ರೂಪಾಯಿ ಸಾಲದ ಖಾತೆಗೆ ಪಾವತಿಸಿರುತ್ತಾರೆ. ಅದರಲ್ಲಿ ಎಷ್ಟು ಅಸಲು ಹಣ, ಎಷ್ಟು ಬಡ್ಡಿ ಹಣ ಎಂದು ನೆನಪಿಲ್ಲ. ನನಗೆ ಸಾಲದ ಖಾತೆಯ ಬಗ್ಗೆ ಸರಿಯಾದ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಚೆಕ್ಕಿನಲ್ಲಿರುವ ಬರವಣಿಗೆಯ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

4. ದೂರಿನಲ್ಲಿ ಹೇಳಿರುವ ಸಾಲವನ್ನು ನೀಡಿದಾಗ ಆರೋಪಿಯ ಸ್ಥಿರಾಸ್ತಿಯ ದಾಖಲಾತಿಯನ್ನು ಪಡೆದುಕೊಂಡಿರುತ್ತೇವೆ. ಸದ್ರಿ ಸ್ಥಿರಾಸ್ತಿಯು ಮಾವಳ್ಳಿ-I ಗ್ರಾಮದ ಸರ್ವೆ ನಂ. 628 ರಲ್ಲಿ 00-08-00

ಕ್ಷೇತ್ರ. ನಿಪಿ-9 ಡಿ.ಪಿ. ನೋಟ್ ನ ಪ್ರತ್ಯೇಕ ಕ್ರಮ ಜರುಗಿಸಿರುವುದಿಲ್ಲ. ನಿಪಿ-9 ಅವಧಿ ಮುಗಿದ ದಾಖಲೆಯಾಗಿದ್ದು, ಅದಕ್ಕೆ ಕಾನೂನಿನಲ್ಲಿ ಯಾವುದೇ ಮಾನ್ಯತೆ ಇಲ್ಲ ಎಂದರೆ ಸರಿಯಲ್ಲ. ದಿನಾಂಕಃ 07-02-2019 ರಂದು ಖಾಲಿ ಚೆಕ್ಕು ನೀಡಿದರೆ ಓ.ಡಿ. ಸಾಲ ನೀಡುತ್ತೇವೆಂದು ಹೇಳಿ ಆರೋಪಿಯಿಂದ ನಿಪಿ-2 ಖಾಲಿ ಚೆಕ್ ನ್ನು ಪಡೆದುಕೊಂಡಿದ್ದೆವು ಎಂದರೆ ಸರಿಯಲ್ಲ. ಸದ್ರಿ ಚೆಕ್ ನ್ನು ದುರುಪಯೋಗಪಡಿಸಿಕೊಂಡು ಈ ಸುಳ್ಳು ಪ್ರಕರಣವನ್ನು ಆರೋಪಿಯ ವಿರುದ್ಧ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ನ್ಯಾ.ದಂ., ಭಟ್ಕಳ.**